# ಉಂಡಮೇಲೆ ರೀಮೇಕೋ ಡಬ್ಬಿಂಗೋ!

ಆಪ್ತರ ಬೀಗರೂಟದ ಸಮಾರಂಭ. ಬಾಳೆಎಲೆ ಊಟ. ಆರಿಸಿ ತಂದ ಮಟನ್ ತುಂಡುಗಳು. ಚಪ್ಪರಿಸುತ್ತಿರುವ ಬೆರಳುಗಳು. ಓಡುತ್ತಿರುವ ಸಿನಿಮಾಗಳು, ಮಲಗಿಕೊಂಡ ಚಿತ್ರಗಳು, ಕಾಲ್‌ಷೀಟ್ ಕೊಡದ ನಾಯಕ, ನಾಯಕಿಯ ನಖರಾ... ಹೀಗೆ ಚಿತ್ರರಂಗದ ಇಕ್ಕಟ್ಟು–ಬಿಕ್ಕಟ್ಟು, ವಿದ್ಯಮಾನಗಳೆಲ್ಲಾ ಚರ್ಚಿತವಾಗತೊಡಗಿದವು. ಊಟದ ಪಂಕ್ತಿಯಲ್ಲಿ ಕುಳಿತಿದ್ದ ಬೇರೆ ಬೀಗರಿಬ್ಬರು ಸಿನಿಮಾ ನಿರ್ಮಾಪಕರೆಂದ ಮೇಲೆ ಚರ್ಚೆ ಅಲ್ಲಿ ಸಕಾರಣವಾದದ್ದೇ.

ಧ್ಯಾನಸ್ಥರಾಗಿ ಊಟ ಮಾಡುತ್ತಿದ್ದ ನಿರ್ಮಾಪಕರ ಎದುರು ಧುತ್ತೆಂದು ರೀಮೇಕ್–ಡಬ್ಬಿಂಗ್ ಚರ್ಚೆ ಬಂತು. ಇನ್ಯಾರೋ ಎರಡಕ್ಕೂ ಇರುವ ವ್ಯತ್ಯಾಸವನ್ನು ಊಟಕ್ಕೆ ಸಮೀಕರಿಸಿ ಹೇಳತೊಡಗಿದರು. 'ಈಗ ನೋಡಿ, ನಿಮ್ಮ ಬಾಳೆಎಲೆಯ ಹೋಲುವಂಥದ್ದೇ ಇನ್ನೊಂದು ಬಾಳೆಎಲೆಯನ್ನು ನನ್ನೆದುರು ಇಟ್ಟು, ನಿಮ್ಮ ಎಲೆಯಲ್ಲೇ ಇರುವ ಐಟಂಗಳನ್ನು ಸೇಮ್ ಟು ಸೇಮ್ ಮಾಡಿ ಈ ಎಲೆ ಮೇಲೆ ಬಡಿಸಿದರೆ ಅದು ರೀಮೇಕ್. ನಿಮ್ಮ ಎಲೆಯನ್ನೇ ಎತ್ತಿಕೊಂಡು ನಾನು ನನ್ನ ಸ್ಟೈಲಿನಲ್ಲಿ ತಿಂದರೆ ಅದು ಡಬ್ಬಿಂಗ್' ಅಂದರು. 'ಡಬ್ಬಿಂಗ್ ಅಂದರೆ ಎಂಜಲು ಅನ್ನು' ಅಂತ ಎದುರಲ್ಲಿದ್ದ ವ್ಯಕ್ತಿ ಹೇಳಿದ್ದೇ ಊಟಕ್ಕೆ ಕೂತ ಅನೇಕರು ಗೊಳ್ಳೆಂದು ನಕ್ಕರು. ಸಿನಿಮಾ ಮಾಡಿದ ಅನುಭವದಲ್ಲಿ ಹಿರಿಯರೇ ಎನ್ನಬಹುದಾದ ಆ ನಿರ್ಮಾಪಕರು ಮಾತ್ರ ನಗಲಿಲ್ಲ.

ಊಟದ ನಂತರ ಮದುವೆ ಆಲ್ಬಂ ನೋಡುವ ಭರಾಟೆ. ಇದು ಡಿಜಿಟಲ್ ಕಾಲವಾದ್ದರಿಂದ ದೊಡ್ಡ ಟೀವಿಗೆ ಪೆನ್‌ಡ್ರೈವ್ ಚುಚ್ಚಿ, ತೆಗೆದ ಫೋಟೋಗಳನ್ನು ದೊಡ್ಡದಾಗಿಯೇ ತೋರಿಸತೊಡಗಿದರು. ಆಗ ನಿರ್ಮಾಪಕರ ಹತ್ತಿರಕ್ಕೆ ಅವರ ಬೀಗರು ಬಂದು ಕೂತರು. ಮೆಲ್ಲಕ್ಕೆ ಇನ್ನೊಬ್ಬರು ರಿಯಲ್ ಎಸ್ಟೇಟಿಗ ಬಂದುಕೂತರು.

ಮತ್ತೆ ಮಾತು ರೀಮೇಕ್, ಡಬ್ಬಿಂಗ್ ಕಡೆಗೆ ಹೊರಳಿತು. ನೂರಾರು ಚಿತ್ರಗಳ ರೀಮೇಕ್ ಹಕ್ಕು ಪಡೆದಿದ್ದ ಆ ನಿರ್ಮಾಪಕರೆಂದರೆ ರಿಯಲ್ ಎಸ್ಟೇಟ್ ಆಸಾಮಿಗೆ ಇನ್ನಿಲ್ಲದ ಅಭಿಮಾನ. ತಮಗೂ ಒಂದು ಸಿನಿಮಾ ಮಾಡಿಬಿಡೋಣವೆಂಬ ಹುಕಿ ಬಂದಿದ್ದರಿಂದ ಒಂದು ರೀಮೇಕ್ ಹಕ್ಕನ್ನು ಅವರು ಇತ್ತಾಗಿ ವರ್ಗಾಯಿಸಿಯಾರೇನೋ ಎಂಬ ಆಸೆಯೇ ಆ ಅಭಿಮಾನಕ್ಕೆ ಕಾರಣ. ಚಿತ್ರರಂಗದ ನವರಸ ನಾಯಕರಿಗೂ ಸೀಡಿಗಳನ್ನು ಮುಫತ್ತಾಗಿ ದಯಪಾಲಿಸಿ, ಆ ಮೂಲಕ ಕತೆಗಳನ್ನು ಹಂಚಿಕೊಂಡ ಅಗ್ಗಳಿಕೆ ಈ ನಿರ್ಮಾಪಕರದ್ದು. ಹಾಗಾಗಿ ರಿಯಲ್ ಎಸ್ಟೇಟಿಗರ ಬಯಕೆ ಸಹಜವಾದದ್ದೇ ಹೌದು.

ಹೇಗೋ ಮನಸ್ಸು ಗಟ್ಟಿ ಮಾಡಿಕೊಂಡು ತಾವು ಒಂದು ಪಿಕ್ಚರ್ ಮಾಡಲು ಹೊರಟಿರುವುದನ್ನೂ, ಕತೆಗಾಗಿ ನಡೆದಿರುವ ಹುಡುಕಾಟವನ್ನೂ, ರೀಮೇಕ್ ಬಗ್ಗೆ ತಮಗೇನೂ ಅಭ್ಯಂತರವಿಲ್ಲ ಎಂಬುದನ್ನೂ ರಿಯಲ್ ಎಸ್ಟೇಟಿಗರು ನಿರ್ಮಾಪಕರಲ್ಲಿ ಹೇಳಿಕೊಂಡರು. ಅಂಥವರನ್ನು ಅಷ್ಟೇನೂ ಎಂಟರ್‌ಟೇನ್ ಮಾಡದ ಆ ಜಾಣ ನಿರ್ಮಾಪಕ ತಕ್ಷಣವೇ ಒಂದು ಅದ್ಭುತವಾದ ಉತ್ತರ ಕೊಟ್ಟರು– 'ಈಗ ಡಬ್ಬಿಂಗ್ ಬರಲಿ ಅಂತ ಚರ್ಚೆ ಶುರುವಾಗೈತೆ. ಸ್ವಲ್ಪ ತಡ್ಕೊಳ್ಳಿ. ಅದೇನಾದ್ರೂ ಬಂದ್ರೆ ನೀವೂ ಅದನ್ನೇ ಮಾಡುವ್ರಂತೆ. ಆಗ ಬೇಕಾದ್ರೆ ಡಿಸ್‌ಕಸ್ ಮಾಡಣ'. ರಿಯಲ್ ಎಸ್ಟೇಟಿಗರು ದಂಗಾದರೂ ಬಾಯಿಗೆ ಸುಣ್ಣ ಹಚ್ಚಿದ ವೀಳ್ಯದೆಲೆ ಇರಿಸಿ ರಂಗಾದರು!

–ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@deccanherald.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68